ದಿನಾಂಕಃ 12-06-2019

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು - ಶ್ರೀ ಎನ್ ಎಸ್ ಪಿ ವಕೀಲರಿಂದ.

ದಾವೆಗೆ ತಕರಾರು ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ವಾದಿಯರು 1956 ಕ್ಕಿಂತ ಪೂರ್ವದಲ್ಲಿ ಜನಿಸಿದ್ದಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಕಾಣಿಸಿದ್ದೇನೆ ಅಂದರೆ ಸರಿ. ವಾದಿಯರು 1956 ಕ್ಕಿಂತ ಪೂರ್ವದಲ್ಲಿ ಜನಿಸಿದ್ದಾರೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಾನು ಆ ರೀತಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ವಾದಿಯರು ತಮ್ಮ ವಾದ ಪತ್ರ ಜೊತೆ ಸಲ್ಲಿಸಿರುವ ವಂಶಾವಳಿಯ ಬಗ್ಗೆ ನನಗೆ ಗೊತ್ತಿಲ್ಲ. ವಂಶಾವಳಿಯ ಬಗ್ಗೆ ಮಾಹಿತಿಯನ್ನು ನಮ್ಮ ವಕೀಲರಿಂದ ಕೇಳಿ ತಿಳಿದುಕೊಂಡಿಲ್ಲ. ನನ್ನ ಅಜ್ಜನ ಹೆಸರು ಸೋಮಲೆಪ್ಪ. ನನ್ನ ತಂದೆ ಹೆಸರು ಮಲ್ಲಪ್ಪ. ನನ್ನ ತಂದೆಗೆ 5 ಜನ ಸಹೋದರಿಯರಿದ್ದು ಅವರ ಹೆಸರು 1.ಗಂಗವ್ವ 2. ಪಾರವ್ವ 3.ನೀಲವ್ವ 4.ಸಂಗವ್ವ ಮತ್ತು 5. ಚಂದ್ರವ್ವ. ಅವರುಗಳ ಪೈಕಿ ಪಾರವ್ವ ಮತ್ತು ಚಂದ್ರವ್ವ ಮರಣ ಹೊಂದಿದ್ದಾರೆ ಅಂದರೆ ಸರಿ. ಚಂದ್ರವ್ವಳನ್ನು ಕುಂದಗೋಳ ತಾಲೂಕಿನ ಗೌಡಗೇರಿ ಗ್ರಾಮಕ್ಕೆ ಕೊಟ್ಟಿದ್ದರು ಅಂದರೆ ಸರಿ. ಚಂದ್ರವ್ವ 2017 ನೇ ಸಾಲಿನಲ್ಲಿ ಮರಣ ಹೊಂದಿದ್ದಾಳೆ ಅಂದರೆ ಸರಿಯಲ್ಲ. ಸದರಿ ಚಂದ್ರವ್ವಳಿಗೆ 2 ಗಂಡು ಮತ್ತು 2 ಹೆಣ್ಣು ಮಕ್ಕಳು ಅಂದರೆ ಸರಿ.

ಅವರುಗಳೆಂದರೆ ವಾದಿ ನಂ.1 ಎ ಯಿಂದ 1 ಡಿ ಅಂದರೆ ಸರಿ. ನನ್ನ ಅಜ್ಜಿಯ ಹೆಸರು ಲಚ್ಚವ್ವ ಅಂದರೆ ಸರಿ. ನನ್ನ ಅಜ್ಜನಿಗೆ ಸೋಮಪ್ಪ ಮತ್ತು ಸೋಮಲೆಪ್ಪ ಎಂದು ಕರೆಯುತ್ತಾರೆ ಅಂದರೆ ಸರಿ. ನಾನು ನನ್ನ ಅಜ್ಜನನ್ನು ನೋಡಿಲ್ಲ. ಮೂಲ ಪುರುಷ ಫಕ್ಕೀರಪ್ಪನಿಗಿಂತ ಪೂರ್ವದಲ್ಲಿ ನನ್ನ ಅಜ್ಜ ಮರಣ ಹೊಂದಿದ್ದರು ಅಂದರೆ ಸರಿಯಲ್ಲ. ಫಕ್ಕೀರಪ್ಪನ ನಂತರ ಸೋಮಪ್ಪ ಜೀವಂತ ಇದ್ದರು ಎಂದು ನನ್ನ ಅತ್ತೆಯರು ನನಗೆ ಹೇಳಿದ್ದರು. ಸೋಮಲೆಪ್ಪ ಯಾವ ಸಾಲಿನಲ್ಲಿ ಮರಣ ಹೊಂದಿದ್ದಾರೆ ಎಂದು ಮರಣ ಪ್ರಮಾಣ ಪತ್ರ ನಾನು ನೋಡಿರುವುದಿಲ್ಲ ಫಕ್ಕೀರಪ್ಪ ಯಾವ ಸಾಲಿನಲ್ಲಿ ಮರಣ ಹೊಂದಿದ್ದಾರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಮೂಲ ಮಾಲೀಕ ಫಕ್ಕೀರಪ್ಪ ತಂದೆ ಜತ್ರೆಪ್ಪ ಲಮಾಣಿ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಲ್ಲೇಶಪ್ಪ ಎಂದು ನುಡಿಯುತ್ತಾರೆ. ಸದರಿ ಫಕ್ಕೀರಪ್ಪನಿಗೆ ಸೋಮಲೆಪ್ಪ ಎನ್ನುವ ಒಬ್ಬನೇ ಮಗ ಅಂದರೆ ನನಗೆ ಗೊತ್ತಿಲ್ಲ. ಆ ವಿಷಯ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ದಾವಾ ಆಸ್ತಿಗಳು ಫಕ್ಕೀರಪ್ಪ ಜತ್ರೆಪ್ಪ ಲಮಾಣಿಯವರ ಮೂಲ ಆಸ್ತಿ ಎಂದು ಬರೆಸಿದ್ದೇನೆ ಅಂದರೆ ಸರಿ.

ದಾವಾ ಆಸ್ತಿ ನನ್ನ ತಂದೆಗೆ ಹೇಗೆ ಬಂದಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಫಕ್ಕೀರಪ್ಪ ನನ್ನ ತಂದೆಯನ್ನು ಪ್ರೀತಿಯಿಂದ ಸಾಕಿದ್ದರಿಂದ ದಾವಾ ಆಸ್ತಿಗಳ ಕಬ್ಜಾವನ್ನು ನನ್ನ ತಂದೆಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ಬಿಟ್ಟು ಕೊಟ್ಟ ಬಗ್ಗೆ ದಾಖಲೆಗಳನ್ನು ನಾನು ನೋಡಿದ್ದೇನೆ. ಅವುಗಳನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ಅವುಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ಸದರಿ ದಾಖಲೆಗಳು ನೊಂದ ಆದ ದಾಖಲೆಗಳಲ್ಲ. ಫಕ್ಕೀರಪ್ಪ ನನ್ನ ತಂದೆಗೆ ಯಾವುದೇ ಆಸ್ತಿಗಳನ್ನು ಬಿಟ್ಟು ಕೊಟ್ಟಿಲ್ಲ ಅಂದರೆ ಸರಿಯಲ್ಲ. ನನ್ನ ಅಜ್ಜ ಸೋಮಲೆಪ್ಪ ಫಕ್ಕೀರಪ್ಪನಿಗಿಂತ ಮೊದಲೇ ಮರಣ ಹೊಂದಿದ್ದರಿಂದ ನನ್ನ ತಂದೆ ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲ್ ಆಗಿ ತನ್ನ ಹೆಸರನ್ನು ಮಾತ್ರ ದಾವಾ ಆಸ್ತಿಗಳಿಗೆ ದಾಖಲಿಸಿಕೊಂಡಿದ್ದಾನೆ ಅಂದರೆ ಸರಿಯಲ್ಲ. ನನ್ನ ತಂದೆ ಸುಮಾರು 26

ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ. ನನ್ನ ತಂದೆ ತನ್ನ ಹೆಸರನ್ನು ದಾವಾ ಆಸ್ತಿಗಳಿಗೆ ದಾಖಲಿಸಿಕೊಂಡ ನಂತರ ಅದನ್ನು ಪ್ರಶ್ನಿಸಿ ನನ್ನ ಅಜ್ಜಿ ಲಚ್ಚವ್ವ ನಿಪಿ-2 ರಂತೆ ಮೇಲ್ಮನವಿ ಸಲ್ಲಿಸಿದ್ದರು ಅಂದರೆ ಸರಿಯಲ್ಲ. ಸದರಿ ಆರ್ ಟಿ ಎಸ್ ಪ್ರಕರಣದಲ್ಲಿ ಆಗಿರುವ ಆದೇಶದ ಬಗ್ಗೆ ನನಗೆ ಮಾಹಿತಿ ಇದೆ. ದಾವಾ ಆಸ್ತಿಯ ಉತಾರೆಯಲ್ಲಿ 1992 ರಿಂದ ಇಲ್ಲಿಯವರೆಗೂ ವಾದಿ ಮತ್ತು ಪ್ರತಿವಾದಿ ಹೆಸರು ಸಾಮೂಹಿಕವಾಗಿ ದಾಖಲಾಗಿವೆ ಅಂದರೆ ಸರಿಯಲ್ಲ. ಎಲ್ಲ ವಿಷಯ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಈ ದಾವಾ ಚಾಲ್ತಿಯಲ್ಲಿರುವಾಗ ದಾವಾ ಆಸ್ತಿಯ ಉತಾರೆಯಲ್ಲಿ ನನ್ನ ಮತ್ತು ನನ್ನ ಸಹೋದರನಾದ ಸಂತೋಷ ಇಬ್ಬರ ಹೆಸರುಗಳನ್ನು ದಾಖಲಿಸಿಕೊಂಡಿದ್ದೇವೆ ಅಂದರೆ ಸರಿ. ನಮ್ಮ ಇಬ್ಬರ ಹೆಸರುಗಳನ್ನು ಮಾತ್ರ ದಾಖಲಿಸಿಕೊಂಡು ವಾದಿಯರ ಹೆಸರುಗಳನ್ನು ಪಹಣಿ ಪತ್ರಿಕೆಯಿಂದ ತೆಗೆದು ಹಾಕಿದ್ದಾರೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಅದೇಶದ ಪ್ರಕಾರ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಈ ನ್ಯಾಯಾಲಯ ಮೊದಲಿಗೆ ಮಾಡಿದ್ದ ಆದೇಶದ ಪ್ರಕಾರ ನಮ್ಮ ಹೆಸರುಗಳನ್ನು ದಾಖಲಿಸಿಕೊಂಡಿದ್ದೇವೆ. ನ್ಯಾಯಾಲಯದ ಆದೇಶ ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ನಾನು ಹಕ್ಕು ಬಿಟ್ಟ ಪತ್ರವನ್ನು ಸೃಷ್ಟಿಸಿ ವಾದಿಯರ ಸಹಿಗಳನ್ನು ಅನುಕರಿಸಿ ವರದಿ ಆಧಾರದ ಮೇಲೆ ನಮ್ಮ ಹೆಸರುಗಳನ್ನು ದಾಖಲಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ತಹಶೀಲ್ದಾರ ಇವರು ಮಾಡಿದ ಆದೇಶದ ವಿರುದ್ಧ ವಾದಿಯರು ಉಪ ವಿಭಾಗಾಧಿಕಾರಿ ಬಳಿ ನಿಪಿ-15 ರಂತೆ ಮೇಲ್ಮನವಿ ಸಲ್ಲಿಸಿದ್ದಾರೆ ಅಂದರೆ ಸರಿ. ದಿನಾಂಕಃ 09.07.2018 ರಂದು ಸದರಿ ಮೇಲ್ಮನವಿ ಪುರಸ್ಕಾರ ಗೊಂಡಿತ್ತು ಅಂದರೆ ಸರಿ. ಸದರಿ ಆದೇಶದ ಆಧಾರದ ಮೇಲೆ ದಾವಾ ಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿಯರ ಹೆಸರುಗಳು ಜಂಟಿಯಾಗಿ ದಾಖಲಾಗಿವೆ ಅಂದರೆ ಸರಿಯಲ್ಲ. ನಿಪಿ-15 ರ ಆದೇಶವನ್ನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿಲ್ಲ ಅಂದರೆ ಸರಿ. ನನ್ನ ಮತ್ತು ಇತರೆ 8 ಜನರ ವಿರುದ್ಧ ಇದೇ ನ್ಯಾಯಾಲಯದಲ್ಲಿ ವಾದಿ ನಂ.3 ಸಿಸಿ ನಂ.409/2016 ನ್ನು ದಾಖಲಿಸಿದ್ದಾರೆ ಅಂದರೆ ಸರಿ. ದಾವಾ ಸಿ ಸ್ಡ್ಯೂಲ್ ಆಸ್ತಿ ಮನೆ ನನ್ನ ತಂದೆಗೆ ಸರಕಾರದಿಂದ ಮಂಜೂರಾಗಿತ್ತು. ಮಂಜೂರಾದ ಕುರಿತು ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿ. ಸದರಿ ಆಸ್ತಿಯು ಸಹ ನಮ್ಮ ಪೂರ್ವಜರಿಂದ ಬಂದ ಆಸ್ತಿ ಅಂದರೆ ಸರಿಯಲ್ಲ. ಯಾವ ಸಾಲಿನಲ್ಲಿ ನನ್ನ ತಂದೆಗೆ ಮನೆ ಮಂಜೂರಾಗಿತ್ತು ನನಗೆ ಗೊತ್ತಿಲ್ಲ ಆದರೆ ನನ್ನ ಬಳಿ ದಾಖಲೆ ಇದೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿ. ನನ್ನ ತಂದೆಗೆ ಸರಕಾರದಿಂದ ಮಂಜೂರಾದ ಕಾರಣ ನಾನು ದಾಖಲೆಯನ್ನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಇವತ್ತಿನವರೆಗೂ ದಾವಾ ಆಸ್ತಿಗಳಲ್ಲಿ ನಾನು ಮತ್ತು ಎಲ್ಲ ವಾದಿಯರು ಸಾಮೂಹಿಕವಾಗಿ ಸಾಗುವಳಿ ಮಾಡುತ್ತಿದ್ದೇವೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಎಲ್ಲರೂ ಸೇರಿ ಗೋವಿನಜೋಳ ಬಿತ್ತನೆ ಮಾಡಿದ್ದೇವೆ ಅಂದರೆ ಸರಿಯಲ್ಲ. ಇವತ್ತಿನವರೆಗೂ ನಮ್ಮ ಮತ್ತು ವಾದಿಯರ ನಡುವೆ ದಾವಾ ಆಸ್ತಿಗಳ ಸಂಬಂಧಪಟ್ಟಂತೆ ಪಾಲು ವಿಭಾಗ ಆಗಿಲ್ಲ ಅಂದರೆ ಸರಿ. ದಾವಾ ಆಸ್ತಿಗಳಲ್ಲಿ ಪಾಲು ಕೊಡಬೇಕಾಗುತ್ತದೆ ಎನ್ನುವ ಕಾರಣಕ್ಕೆ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಗೆ ಸರ್ವೆ ನಂ.23 ಸಿ ಮತ್ತು 27/4 ಪಹಣಿಗಳನ್ನು ತೋರಿಸಿ ಅವುಗಳಲ್ಲಿ ವಾದಿ ಮತ್ತು ಪ್ರತಿವಾದಿಯರ ಹೆಸರು ಸಾಮೂಹಿಕವಾಗಿ ದಾಖಲಾಗಿವೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಒಪ್ಪಿದ್ದರಿಂದ ನಿಪಿ-26 ಮತ್ತು 27 ಎಂದು ಗುರುತಿಸಲಾಯಿತು. ದಾವಾ ಆಸ್ತಿಗಳು ನಮ್ಮ ಮತ್ತು ವಾದಿಯರ ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿರುವ ಆಸ್ತಿಗಳು ಅಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೂ ಹಾಗೂ ವಾದಿಯರಿಗೂ ಸಮನಾದ ಹಿಸ್ಸೆ ಇದೆ ಅಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ದಾಖಲಾಗಿದ್ದ ದುರುಪಯೋಗ ಪಡೆದು ವಾದಿಗೆ ಗೊತ್ತಾಗದಂತೆ ನನ್ನ ಹೆಸರು ದಾಖಲಿಸಿಕೊಂಡಿದ್ದೆವೆ ಅಂದರೆ ಸರಿಯಲ್ಲ. ನಮ್ಮ ಹೆಸರುಗಳನ್ನು ದಾಖಲಿಸಿಕೊಳ್ಳುವ ಪೂರ್ವದಲ್ಲಿ ವಾದಿಯರಿಗೆ ಅದರ ಬಗ್ಗೆ ಮಾಹಿತಿ ತಿಳಿಸಿರಲಿಲ್ಲ ಅಂದರೆ ಸರಿಯಲ್ಲ. ನನ್ನ ಅಜ್ಜಿ

ಸಲ್ಲಿಸಿದ್ದ ಮೇಲ್ಮನವಿ ಆದೇಶ ಆದ ನಂತರ ಅದರ ವಿರುದ್ದ ಮೇಲ್ಮನವಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆದೇಶ ಅಂತಿಮ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.